# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಅಭಿಯಂತರವರ ಕಛೇರಿ, ದಾಸರಹಳ್ಳಿ ವಲಯ,

ಎಂ.ಇ.ಐ.ಬಡಾವಣೆ, ಬಾಗಲಗುಂಟೆ, ಹೆಸರಘಟ್ಟ ಮುಖ್ಯರಸ್ತೆ, ಬೆಂಗಳೂರು -560073.

ನಂ: ಬಿಬಿಎಂಪಿ/ಮು.ಅ/ದಾವ/ತಾ.ಮ/195 /2018-19 ದಿನಾಂಕ:

## ತಾಂತ್ರಿಕ ಮಂಜೂರಾತಿ

**ವಿಷಯ:** "Construction of drain and concrete of works at Karekallu and Bagalagunte old Village Surrounding in Ward No. 14 Bagalagunte" ಕಾಮಗಾರಿಯ ಅಂದಾಜು ಪಟ್ಟಿಗೆ ತಾಂತ್ರಿಕ ಮಂಜೂರಾತಿ ನೀಡುವ ಬಗ್ಗೆ.

**ಉಲ್ಲೇಖ:** ಕಾರ್ಯಪಾಲಕ ಅಭಿಯಂತರರು ರವರ ಆಡಳಿತಾತ್ಮಕ ಅನುಮೋದನೆ ಸಂಖ್ಯೆ: ಕಾ.ಪಾ.ಅ/ದಾ.ವ/ಆ.ಮ/91/2018-19, ದಿನಾಂಕ: 29.12.2018.

**ಅಂದಾಜು ಮೊತ್ತ:** ರೂ. 100.00 ಲಕ್ಷಗಳು **ಪಿ-ಕೋಡ್:** 1878

**ಜಾಬ್ ಸಂಖ್ಯೆ:** 014-19-000005

*******

**ಪ್ರಸ್ತಾವನೆ:-**

ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ) ವಿಭಾಗ ರವರು ಮೇಲ್ಕಂಡ ಕಾಮಗಾರಿಯ ಅಂದಾಜು ಪಟ್ಟಿಯನ್ನು ರೂ. 100.00 ಲಕ್ಷಗಳ (ರೂಪಾಯಿ ನೂರು ಲಕ್ಷಗಳು ಮಾತ್ರ) ಮೊತ್ತಕ್ಕೆ ತಯಾರಿಸಿ, ಸಲ್ಲಿಸಿದ್ದು, ಕಂಡಿಕೆ (24)ರ ಮಾನ್ಯ ಆಯುಕ್ತರ ಆದೇಶದನ್ವಯ ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ) ವಿಭಾಗ ರವರು ಆಡಳಿತಾತ್ಮಕ ಅನುಮೋದನೆ ಮೆಮೊ ಹೊರಡಿಸಿದ್ದು, ತಾಂತ್ರಿಕ ಮಂಜೂರಾತಿ ಕೋರಿರುವ ಹಿನ್ನೆಲೆಯಲ್ಲಿ ಸದರಿ ಪ್ರಸ್ತಾವನೆಯನ್ನು ಪರಿಗಣಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಆದೇಶ**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ "Construction of drain and concrete of works at Karekallu and Bagalagunte old Village Surrounding in Ward No. 14 Bagalagunte" ಕಾಮಗಾರಿಯ ಅಂದಾಜು ಪಟ್ಟಿಯನ್ನು ರೂ. 100.00 ಲಕ್ಷಗಳ (ರೂಪಾಯಿ ನೂರು ಲಕ್ಷಗಳು ಮಾತ್ರ) ಮೊತ್ತಕ್ಕೆ ತಯಾರಿಸಿ ಸಲ್ಲಿಸಿದ್ದು, ಈ ಅಂದಾಜು ಪಟ್ಟಿಗೆ ಕೆಳಕಂಡ ತಾಂತ್ರಿಕ ನಿಬಂಧನೆಗಳಿಗೆ ಒಳಪಟ್ಟು ತಾಂತ್ರಿಕ ಮಂಜೂರಾತಿ ನೀಡಲಾಗಿದೆ. ಈ ತಾಂತ್ರಿಕ ಮಂಜೂರಾತಿಯನ್ನು ಮುಖ್ಯ ಅಭಿಯಂತರವರ ತಾಂತ್ರಿಕ ಮಂಜೂರಾತಿ ಅನುಮೋದನೆ ಪುಸ್ತಕದ ಪುಟ ಸಂಖ್ಯೆ: 19 ಕ್ರಮ ಸಂಖ್ಯೆ: 195 ರಲ್ಲಿ ನೊಂದಾಯಿಸಲಾಗಿದೆ.

**ತಾಂತ್ರಿಕ ನಿಬಂಧನೆಗಳು:-**

1. ಅಂದಾಜಿನಲ್ಲಿ ಅಳವಡಿಸಿರುವ ಇಡಿಗಂಟು (Lumpsum) ರೂಪದಲ್ಲಿ ಒದಗಿಸಲಾದ ಮೊತ್ತಗಳಿಗೆ ವಿವರವಾದ ಅಂದಾಜುಗಳನ್ನು ಸಿದ್ದಪಡಿಸಿ, ಕೆಲಸ ಆರಂಭಿಸುವ ಮುನ್ನ ಸಕ್ಷಮ ಅಧಿಕಾರಿಗಳಿಂದ ಅನುಮೋದನೆ ಪಡೆಯತಕ್ಕದ್ದು.
2. ಕೆಲಸ ಪ್ರಾರಂಭಿಸುವ ಮುನ್ನ ಕಾಮಗಾರಿ ನಡೆಯುವ ಸ್ಥಳವು ವಿವಾದಗಳಿಂದ ಮುಕ್ತವಾಗಿದೆಯೆಂದು ಪರಿಶೀಲಿಸತಕ್ಕದ್ದು.
3. ರಸ್ತೆ ಕಾಮಗಾರಿಗೆ ಸಂಬಂಧಪಟ್ಟಂತೆ ರಸ್ತೆ ಇತಿಹಾಸ ವಹಿಯಲ್ಲಿ ದಾಖಲಿಸತಕ್ಕದ್ದು. (Road History).
4. ಕಾಮಗಾರಿಯನ್ನು ಮೌಲ್ಯ ಪ್ರಮಾಣ ವಿವರಣೆಯ (Standard Specifications) ಪ್ರಕಾರ ನಿರ್ವಹಿಸತಕ್ಕದ್ದು.

ಮುಖ್ಯ ಅಭಿಯಂತರರು
ದಾಸರಹಳ್ಳಿ ವಲಯ

**ಪ್ರತಿಯನ್ನು:-**

1. ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ) ವಿಭಾಗ ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
2. ಸಹಾಯಕ ಹಣಕಾಸು ನಿಯಂತ್ರಕರು, ದಾಸರಹಳ್ಳಿ ವಲಯ ರವರ ಗಮನಕ್ಕೆ.
3. ಕಛೇರಿ ಕಡತಕ್ಕೆ.

Scanned by CamScanner